ಹೊರಗೆ ಬರಬೇಡ, ಆಗಾಗ ನೀರು ಕುಡಿ, ಜೊತೆಗೆ ಕಾಗೆ, ಹದ್ದು, ಹಾಳು ಮೂಳು ಎಲ್ಲವೂ ಹೊರಗೆ ಆಹಾರಕ್ಕಾಗಿ ಸುತ್ತಾಡುತ್ತಿರುತ್ತವೆ ನಾನು ಗೂಡನ್ನು ಸಾಕಷ್ಟು ಭದ್ರಪಡಿಸಿರುವೆ ನಿನ್ನ ಇರವು ಅವಕ್ಕೆ ತಿಳಿಯಬಾರದು ಎಂದು. ನನಗೆ ಅವುಗಳ ಚಿಂತೆಗಿಂತ ನೀನು ಹೊರಗೆ ಹೋಗಬಾರದು ಎಂಬ ಚಿಂತೆಯೇ ಹೆಚ್ಚಿದೆ. ಈ ಸುಡು ಬಿಸಿಲಿಗೆ ರೆಕ್ಕೆ ಬಡಿಯಲು ನಿನಗೆ ಶಕ್ತಿ ಇಲ್ಲ. ಇಲ್ಲದ ಉದ್ಧಟತನವನ್ನು ಮಾಡಬೇಡ, ನಿನಗೆ ಹಾರಲು ನಾನು ಈ ಬೇಸಿಗೆ ಕಳೆದ ನಂತರ ಹೇಳಿಕೊಡುವೆ ಅಲ್ಲಿಯವರೆಗೂ ಸುಮ್ಮನೆ ಇರು. ಇಷ್ಟು ದಿನಗಳು ನೀನು ಮಾಡಿದ ಅವಾಂತರಗಳಿಂದ ನನಗೆ ತುಂಬಾ ತೊಂದರೆ ಆಗಿದೆ' ಎಂದು ಹೇಳಿತು. ಇದನ್ನು ಕೇಳಿ ಮರಿಗುಬ್ಬಿ 'ಅಮ್ಮ ನಾನು ಹಾರುವುದೇ ಬೇಡವೇ ನಿನಗೆ?' ಎಂದು ಪ್ರಶ್ನಿಸಿತು. ತಾಯಿ 'ಹಾರಲು ಬೇಡ ಎಂದು ಯಾವ ತಾಯಿ ಹೇಳುತ್ತಾಳೆ? ಯಾವಾಗ ಹಾರಬೇಕು, ಎಲ್ಲಿ ಹಾರಬೇಕು, ಹೇಗೆ ಹಾರಬೇಕೆಂಬುದು ನಿನಗೆ ತಿಳಿಯದು, ನಿನ್ನಲ್ಲಿ ಇರುವುದು ಅಧಿಕ ತುಂಟತನ. ಆದ್ದರಿಂದ ಹೆಚ್ಚು ಅವಗಢ ಮಾಡಿಕೊಂಡಿರುವೆ. ಆದರೆ ಈ ದಿನಗಳು ಹಾಗಿಲ್ಲ, ತೆಪ್ಪಗೆ ಗೂಡಿನಲ್ಲಿ ಇರು' ಎಂದು ಹೇಳಿ ಆಹಾರ ತರಲು ಹೊರಟಿತು.

ಅತ್ತ ತಾಯಿ ಹೊರಟ ನಂತರ ಎಂದಿನಂತೆ ಮರಿ ಗುಬ್ಬಿ ಮೆಲ್ಲಗೆ ಗೂಡಿನ ಬಾಗಿಲನ್ನು ತೆರೆದು ರೆಕ್ಕೆಯನ್ನು ಬಡಿದುಕೊಂಡು ಹೊರಗೆ ಬಂದಿತು. ಹೊರಗಿನ ಆಕಾಶ, ಬಿಸಿಲು ಪಕ್ಷಿಗಳ ಕಲರವ ಗಾಳಿ ಎಲ್ಲವನ್ನು ಕಂಡು ಮೆಲ್ಲಗೆ ರೆಕ್ಕೆಯನ್ನು ಬಡಿದು ಹಾರತೊಡಗಿತು. ತನ್ನ ಗೂಡು ಇರುವ ಮರದಿಂದ ಮುಂದಿನ ಮರಕ್ಕೆ ಸಾಗುತ್ತಾ ಹಾರುತ್ತಿರುವಾಗಲೇ ಬಿಸಿಲಿನ ಝಳಕ್ಕೆ ಮೆಲ್ಲಗೆ ರೆಕ್ಕೆಗಳಲ್ಲಿ ಶಕ್ತಿ ಕ್ಷೀಣಿಸತೊಡಗಿತು. ಆದರೂ ಮತ್ತೆ ಪ್ರಯಾಸ ಪಟ್ಟು ರೆಕ್ಕೆಗಳನ್ನು ಬಡಿಯುತ್ತಾ ಹಾರತೊಡಗಿದ್ದಾಗ ಗೂಡು ತುಂಬಾ ದೂರವಿತ್ತು ಹಿಂತಿರುಗಲು ಸಾಧ್ಯವಾಗದ ಸ್ಥಿತಿಯಲ್ಲಿ. ಮರಿ ಗುಬ್ಬಿ ಮೆಲ್ಲಗೆ ರೆಕ್ಕೆಗಳನ್ನು ಬಡಿಯುವ ಪ್ರಯತ್ನಮಾಡುತ್ತಿರುವಾಗಲೇ ಕೆಳಗೆ ಬಿತ್ತು. ಆದರೆ ಅದೆಲ್ಲಿಂದಲೋ ಶರವೇಗದಿ ಬಂದ ತಾಯಿ ಗುಬ್ಬಿ ಅದನ್ನು ಹಿಡಿದುಕೊಂಡು ಗೂಡಿನ ಒಳಗೆ ಕರೆದುಕೊಂಡು ಹೋಯಿತು. ಒಂದು ದೊಡ್ಡ ಅನಾಹುತ ತಪ್ಪಿದಂತಾಯಿತು ಎಂಬ ನಿರಾಳಕ್ಕೆ ತಾಯಿ ಗುಬ್ಬಿ ಬಂದರೆ ಮರಿ ಗುಬ್ಬಿಗೆ ತನ್ನ ರೆಕ್ಕೆಗಳನ್ನು ಬಡಿಯಲು ಆಗದಷ್ಟು ಬಲಹೀನವಾಗಿದ್ದವು. ದುಃಖ, ಹತಾಶೆ, ನೋವು, ಸಂಕಟ ಅಮ್ಮನ ಮುಖವನ್ನು ನೋಡಿದಾಗ ಎಲ್ಲವೂ ಒಟ್ಟಿಗೆ ಬಂದು ಮರಿಗುಬ್ಬಿ ಅಳಲಾರಂಭಿಸಿತು ಅಪರಾಧಿ ಭಾವದಿಂದ. ಮರಿಯನ್ನು ತಬ್ಬಿಕೊಂಡು ಸಂತೈಸಿತು ತಾಯಿಗುಬ್ಬಿ. ಹೆದರಬೇಡ ಮಗು ಸ್ವಲ್ಪ ದಿನಗಳ ನಂತರ ಎಲ್ಲವೂ ಸರಿ ಹೋಗುತ್ತದೆ. ಈಗ ಶಾಂತವಾಗಿ ಮಲಗು ಎಂದು ಹೇಳಿತು. ತಾಯಿ ಹೇಳಿದಂತೆ ನಾಲ್ಕು ದಿನ ಕಳೆದರೂ ಮರಿಗೆ ತನ್ನ ರೆಕ್ಕೆಗಳನ್ನು ಬಡಿಯಲು ಸಾಧ್ಯವಾಗುತ್ತಿರಲಿಲ್ಲ. ಮತ್ತಷ್ಟು ಹೆದರಿದ ಮರಿಗುಬ್ಬಿ 'ಅಮ್ಮ ನನಗೆ ಏನಾಯಿತು? ನೀನು ಹೇಳಿದೆ ಸ್ವಲ್ಪ ದಿನ ಕಳೆಯಲಿ ಎಂದು. ಈಗ ನೋಡಿದರೆ ನನ್ನ ರೆಕ್ಕೆಗಳು ಹೀಗೆ ಇವೆ? ಹೇಳಮ್ಮ ಏನಾಯ್ತು?' ತಾಯಿ ಗುಬ್ಬಿ ಶಾಂತವಾಗಿ ಹೇಳಿತು. 'ಮಗು ನಾನು ನಿನಗೆ ಅಂದೇ ಬಹಳಷ್ಟು ಎಚ್ಚರವನ್ನು ನೀಡಿ ಹೋಗಿದ್ದೆ. ಆದರೆ, ನೀನು ಮಾತು ಕೇಳದೇ ಬಹಳ ದೂರಕ್ಕೆ ಹಾರಿರುವೆ. ಬಿಸಿಲಿನ ಅಧಿಕ ತಾಪಕ್ಕೆ ನಿನ್ನ ಎಳೆಯರೆಕ್ಕೆಗಳಲ್ಲಿ ಶಕ್ತಿ ಕುಂದಿದೆ. ನಿನ್ನ ದೇಹದ ಮಿತಿಯನ್ನು ಮೀರಿಯೂ ನೀನು ಹೆಚ್ಚಿನ ಪ್ರಯತ್ನವನ್ನು ಮಾಡಿರುವುದರಿಂದ ಹೀಗಾಗಿದೆ. ಕೆಲವು ಸಮಯ ಬೇಕು ನೀನು ಸಹಜ ಸ್ಥಿತಿಗೆ ಮರಳಲು. ತಾಯಿಯ ಮಾತು ಕೇಳಿ ಗಾಬರಿಯಿಂದ ಅಮ್ಮನ ಮುಖವನ್ನು ನೋಡಿತು. ತಾಯಿ ಗುಬ್ಬಿ ನಿಧಾನವಾಗಿ, ಅದಕ್ಕೆ ಹೇಳುವುದು ಮಗು ಅನುಭವದ ಮಾತನ್ನು ಕೇಳಬೇಕು ಎಂದು. ಈಗಲಾದರೂ ತಿಳಿಯಿತೆ ಮಗು ಕೇವಲ ನಾವು ಹಾರುವುದು ಒಂದೇ ಅಲ್ಲ, ಯಾವ ಸಮಯಕ್ಕೆ ಹಾರಬೇಕು ಹೇಗೆ ಹಾರಬೇಕು, ಎಲ್ಲಿ ಹಾರಬೇಕು ಎಂಬ ತಿಳಿವು ಬೇಕು? ಅಲ್ಲವೇ ಎಂದು ತಾಯಿ ಗುಬ್ಬಿ ಮರಿಯನ್ನು ಕೇಳಿತು. ಹೌದು ಅಮ್ಮ ನಿನ್ನ ಮಾತನ್ನು ಇನ್ನು ಮೇಲೆ ಎಂದು ಮೀರುವುದಿಲ್ಲ. ದಯವಿಟ್ಟು ನನ್ನ ತಪ್ಪನ್ನು ಕ್ಷಮಿಸು ನನಗೆ ರೆಕ್ಕೆ ಬರಲಿ ಅಮ್ಮ ನನಗೆ ರೆಕ್ಕೆ ಬರಬೇಕು ಎಂದು ದುಃಖಿಸಿತು. ಮರಿಯನ್ನು ಸಂತೈಸಿದ ತಾಯಿ ಹೆದರಬೇಡ ಧೈರ್ಯವಾಗಿರು. ಇನ್ನು ಕೆಲವು ದಿನಗಳಲ್ಲಿ ನೀನು ಸಂಪೂರ್ಣ ಗುಣವಾಗುವೆ ಎಂದು ಹೇಳಿತು. ಅಮ್ಮನ ಮಾತಿನಂತೆ ಮರಿ ಗುಬ್ಬಿ ಚೇತರಿಸಿಕೊಳ್ಳಲು, ಮೊದಲಿನ ಸ್ಥಿತಿಗೆ ಬರಲು ತಿಂಗಳುಗಳೇ ಕಳೆದವು. ಇಷ್ಟು ದಿನಗಳಲ್ಲಿ ಮರಿ ಗುಬ್ಬಿಗೆ ತನ್ನ ಆರೋಗ್ಯದ ಬಗ್ಗೆ ಹೆಚ್ಚಿನ ಅರಿವಾಯಿತು. ಎಂದೂ ಅಮ್ಮನ ಮಾತನ್ನು ಮೀರಬಾರದು ಎಂಬ ಬುದ್ಧಿಯು ಬಂದಿತು. ತಿಂಗಳು ಕಳೆದ ನಂತರ ತಾಯಿಯೊಂದಿಗೆ ಒಟ್ಟಿಗೆ ನೀಲಿಯ ಬಾನಲ್ಲಿ ಹಾರಿ ಮೇಲೆ ಮೇಲೆ ತೇಲಿದವು.

## ಕುಂಚ ಪ್ರಪಂಚ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.

**ವಿಳಾಸ:** **editorsu@sudha.co.in**



ಅರುಂಧತಿ ಎ.
7ನೇ ತರಗತಿ, ಎಸ್. ನಿಜಲಿಂಗಪ್ಪ ಇಂಟರ್‌ನ್ಯಾಷನಲ್ ಸ್ಕೂಲ್, ಹೊಸದುರ್ಗ





ವೈಷ್ಣವಿ
4ನೇ ತರಗತಿ, ಅಮಾತ್ರ ಅಕಾಡೆಮಿ, ಬೆಂಗಳೂರು

